DOC-503
T-P.2

Reg No B G 155 29—6.—72

55th Year of Publication ★ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸಮಾಜವಾದಿ
ಸಮಾಜೋತ್ತಮ
ಸಚಿತ್ರ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹೊಸ ಅಧ್ಯಾಯಕ್ಕೆ ಭಾರತ ಪಾಕೀಸ್ತಾನ ನಾಯಕರ ಕರೆ

ಶಿರ

ಉದ್ಯೋಗದ ಬಗೆಗೆ ಪರಿಶೀಲನೆ

ಮೈಸೂರು ರಾಜ್ಯದಲ್ಲಿ ಖಾಸಗಿ ಹಾಗೂ ಸರ್ಕಾರಿ ಕೈಗಾರಿಕೆಗಳಲ್ಲಿ ಶೇಕಡಾ 80 ರಷ್ಟು ಕೆಲಸಗಳನ್ನು ಮೈಸೂರು ಜನತೆಗೆ ಕಡ್ಡಾಯವಾಗಿ ಕೊಡಬೇಕೆಂಬ ಸೂಚನೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೆಂದು ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್ ಬೆಂಗಳೂರಿನಲ್ಲಿ ತಿಳಿಸಿದರು. ಅವರು ತಮ್ಮ ಮಾತನ್ನು ಮುಂದುವರಿಸುತ್ತಾ, ರಾಜ್ಯದ ಜನರಿಗೆ ಕೈಗಾರಿಕೆಗಳಲ್ಲಿ ನಿರ್ದಿಷ್ಟ ಸಂಖ್ಯೆ ಉದ್ಯೋಗ ಮೀಸಲಿಡುವಂತೆ ಕೇಂದ್ರವನ್ನು ಕೇಳಲಾಗುವುದು ಎಂದರು.

●

ಅಂಚೆಚೀಟಿಗೆ ಭಾರಿ ಮೊತ್ತ

ಬ್ರಸಲ್ಸ್ ವಸ್ತು ಪ್ರದರ್ಶನದಲ್ಲಿ ಸಾಗರೋತ್ತರ ಕಲೆಕ್ಟರ್ ಒಬ್ಬರು 20ಸಾವಿರ ಪೌಂಡಿಗೆ ಮಾರೀಟೀಸ್ ಪೋಸ್ಟ್‌ಆಫೀಸ್ ಎಂಬ 2 ಪೆನ್ನಿಯ 1847 ನೇ ವರ್ಷದ ಅಂಚೆಚೀಟಿ ಕೊಂಡರು.

★

ನಿರುದ್ಯೋಗಿಗಳು

ಮೈಸೂರು ರಾಜ್ಯದಲ್ಲಿ 2765 ಇಂಜಿನಿಯರಿಂಗ್ ಪದವೀಧರರು, 6585 ಡಿಪ್ಲೊಮಾ ಪಡೆದ ಇಂಜಿನಿಯರು ಮತ್ತು 380 ವೈದ್ಯರು ನಿರುದ್ಯೋಗಿಗಳು ಆಗಿರುವರೆಂದು ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

★

ಶತಾಯುಷಿ

ಉತ್ತರ ಆರ್ಕಾಟಿನ ಗುಡಿಯಾಟಂಗೆ ಹತ್ತು ಮೈಲಿಗಳ ದೂರವಿರುವ ಸೆನ್‌ದ ತ್ತೂರ್ ಗ್ರಾಮದಲ್ಲಿರುವ ಮುರುಗಯ್ಯಾನ್ ಎಂಬಾತನಿಗೆ 137 ವರ್ಷ ವಯಸ್ಸು. ಆತನ ಹಲ್ಲುಗಳು ಗಟ್ಟಿಭದ್ರವಾಗಿವೆ

★

ರಾಜ್ಯಾಂಗ ವಿರೋಧ

ಸರ್ಕಾರ ಖಾಸಗಿ ಕಾಲೇಜುಗಳನ್ನು ವಹಿಸಿಕೊಳ್ಳಬೇಕೆಂಬ ಮೈಸೂರು ವಿಶ್ವವಿದ್ಯಾನಿಲಯದ ಖಾಸಗಿ ಕಾಲೇಜ್‌ಗಳ ಉಪಾಧ್ಯಾಯರ ಸಂಘದ ಕೇಳಿಕೆಯನ್ನು ಶಿಕ್ಷಣ ಮಂತ್ರಿ ಶ್ರೀ ಬದರೀನಾರಾಯಣರು ತಿರಸ್ಕರಿಸಿ, ಶಾಸನ ರೀತ್ಯಾ ಅದು ಸಾಧ್ಯವಿಲ್ಲವೆಂದು, ಅದು ರಾಜ್ಯಾಂಗ ವಿರೋಧವೆಂದು ವಿಧಾನ ಸಭೆಯಲ್ಲಿ ತಿಳಿಸಿದರು.

★

★ ಪಾಕೀಸ್ತಾನ ಜನತೆಗೆ ಸಮ್ಮತವಲ್ಲದ ಯಾವುದಕ್ಕೂ ತಾವು ಪಕ್ಷವಾಗುವುದಿಲ್ಲ ಎಂದು, ಅವಶ್ಯವಾದಲ್ಲಿ ಉನ್ನತ ಸಭೆಯಲ್ಲಿ ಸಭಾತ್ಯಾಗ ಮಾಡುವುದಾಗಿಯೂ ಸಿಮ್ಲಾಕ್ಕೆ ಬರುವ ಮುನ್ನ ಪಾಕೀಸ್ತಾನದ ಅಧ್ಯಕ್ಷ ಭುಟ್ಟೊ ರಾವಲ್ಪಿಂಡಿಯಲ್ಲಿ ತಿಳಿಸಿದರು.

ವಿದೇಶ ಪ್ರವಾಸ

ರಾಷ್ಟ್ರಪತಿಯವರ ಗೌರವ ನೇತ್ರ ವೈದ್ಯರಾದ ಡಾ|| ಎಂ. ಸಿ. ಮೋದಿಯವರು ಅಮೇರಿಕಾಕ್ಕೆ ವಿಮಾನದಲ್ಲಿ ತೆರಳಿದರು. ಆಗಸ್ಟ್‌ನಲ್ಲಿ ವಾಪಸಾಗುವರು.

★

ಕಾಂಗ್ರೆಸ್ ಪಕ್ಷದ ಸಮ್ಮತಿ

ಪಾನಪ್ರತಿಬಂಧ ರದ್ದು ಪಡಿಸುವಂತೆ ಮಹಾರಾಷ್ಟ್ರದ ಸರ್ಕಾರಕ್ಕೆ ಅಲ್ಲಿನ ಕಾಂಗ್ರೆಸ್ ಪಕ್ಷ ಸಮ್ಮತಿಸಿಹೆ.

★ ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು 55 ರಿಂದ 58 ಕ್ಕೆ ಏರಿಸುವ ಅಂಶ ಸರ್ಕಾರದ ಪರಿಶೀಲನೆಯಲ್ಲಿ ಇದೆ ಎಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ವಿಧಾನ ಸಭೆಯಲ್ಲಿ ತಿಳಿಸಿದರು.

ಒಲಂಪಿಯಾ ಮೈಸೂರು.

ತಾ 30-6-72 ನೇ ಶುಕ್ರವಾರದಿಂದ ಡೈಮಂಡ್ ಯುಗದ ಆರಂಭ

ದಿನ 3 ಪ್ರದರ್ಶನಗಳು 3-30, 6-30 ಮತ್ತು 9-45 ಕ್ಕೆ

ನಿಮಗೂ ಮತ್ತು ನಿಮ್ಮ ಮನೆಯಂದಿಗೆಲ್ಲಾ ಖಂಡಿತವಾಗಿಯೂ
ಮನೋರಂಜನೆ ನೀಡುವ ಸೋವಿಕ್ಸ್‌ಪೋರ್ಟ್ ಫಿಲ್ಮ್ಸ್‌ರವರ ಅತ್ಯಂತ ಹಾಸ್ಯಭರಿತ
ರೋಮಾಂಚಕ ಚಿತ್ರರತ್ನ

ಡೈಮಂಡ್ ಆರಮ್
ಲ

ಕಲರ್ ಮತ್ತು ಸ್ಕೋಪ್

ಶೃಂಗ ಸಭೆ

ಸಿಮ್ಲಾ— ಶೃಂಗ ಸಭೆ ಪ್ರಾರಂಭವಾದಾಗ ಭುಟ್ಟೊ ಮತ್ತು ಇಂದಿರಾರವರು, ಭಾರತ–ಪಾಕ್ ಹೊಡೆದಾಟ, ಘರ್ಷಣೆಗಳು ಮುಕ್ತಾಯಗೊಂಡು, ಇವುಗಳ ಸಂಬಂಧದಲ್ಲಿ ಹೊಸ ಅಧ್ಯಾಯ ಪ್ರಾರಂಭಕ್ಕೆ ಕರೆಯಿತ್ತರು.

ಎರಡು ನಿಯೋಗಗಳ ಪ್ರಥಮ ಹಂತದಲ್ಲಿ ಭುಟ್ಟೋರವರು, ಭಾರತದೊಡನೆ ಶಾಂತಿಯ ತಮ್ಮ ಇಚ್ಛೆಯ ಮಾತನಾಡಿದರು – ನಂತರ ಇಂದಿರಾರವರ ಕಡೆ ತಿರುಗಿ, 'ಶ್ರೀಮತಿಯವರೇ, ನನ್ನನ್ನು ನಂಬಿ ; ನಮಗೆ ಶಾಂತಿಯನ್ನು ಬಯಸುತ್ತೇವೆ, ಹೊಡೆದಾಟ ಯುದ್ಧ ಬಗ್ಗೆ ನನಗೆ ಸಾಕಾಗಿಹೋಗಿದೆ.

●

ಆರ್ ಎಸ್ ಎಸ್ ಗೆ ಅನುಮತಿ ಇಲ್ಲ

ಶಾಲೆಗಳ ಆಟದ ಮೈದಾನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ದೈಹಿಕ ತರಬೇತಿ ಪಡೆಯದಂತೆ-ಮೈಸೂರು ಸರಕಾರ ಸೂಚಿಸಿದೆ.

★

ತಿರುಪತಿಗೆ ಮುಖ್ಯಮಂತ್ರಿಯವರು

ತಿರುಪತಿಯಲ್ಲಿ ಚತ್ರವನ್ನು ಉದ್ಘಾಟನೆ ಮಾಡುವ ಸಲುವಾಗಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸುರವರು ಮುಂದಿನ ತಿಂಗಳು 8 ರಂದು ಅಲ್ಲಿಗೆ ತೆರಳಿ ಅದೇ ರಾತ್ರಿ ಬೆಂಗಳೂರಿಗೆ ವಾಪಸಾಗುವರು.

★

* ಸರ್ಕಾರದ ಪರಿಶೀಲನೆಯಲ್ಲಿ

63–64 ನೇ ಸಾಲಿನಿಂದ ಖಾಸಗಿ ಕಾಲೇಜುಗಳ ಉಪಾಧ್ಯಾಯರಿಗೆ ವಿರಾಮ ವೇತನ ಮತ್ತು ಗ್ರಾಚುಯಿಟಿ ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಶಿಕ್ಷಣ ಮಂತ್ರಿ ಶ್ರೀ ಬದರೀನಾರಾಯಣರವರು ವಿಧಾನ ಸಭೆಯಲ್ಲಿ ತಿಳಿಸಿದರು.

ಅಗ್ನಿಯಿಂದ ಸಾವು

ಮನೆಲಾದ ಬಾಸಗಿ ಆಸ್ಪತ್ರೆಯೊಂದರಲ್ಲಿ ಆದ ಅಗ್ನಿ ಅನಾಹುತದಲ್ಲಿ ಹದಿನೇಳು ಜನರು ಸತ್ತರು.

★

ಪರೀಕ್ಷಾಧಿಕಾರಿಯು ಸಸ್ಪೆಂಡ್

ಕೆಲವು ಅಕ್ರಮಗಳಿಗಾಗಿ ಸರ್ಕಾರಿ ಪರೀಕ್ಷೆಗಳ ಡೆಪ್ಯುಟಿ ಕಮೀಷನರ್ ಶ್ರೀ ಪಿ. ಎಂ. ಜಾರ್ಜ್‌ರನ್ನು ಸಸ್ಪೆಂಡ್ ಮಾಡಲಾಗಿಸೆಯೆಂದು ತಿರುನೇಂದ್ರಂ ವಾರ್ತೆ.

● ಆಗಸ್ಟ್ 15 ರೊಳಗೆ ಆಂಧ್ರದಲ್ಲಿ ಹರಿಜನರಿಗಾಗಿ 55 ಸಾವಿರ ಮನೆಗಳು ನಿರ್ಮಾಣವಾಗಲಿದೆ.

★ 24 ಪರಗಣ ಜಿಲ್ಲೆಯ ಕಾಕ್‌ದ್ವೀಪದಲ್ಲಿ ಹಸಿವೆಯಿಂದ 4 ಮಂದಿ ಸತ್ತರೆಂದು ವರದಿಯಾಗಿದೆ.

ಮನೆ ಬಿದ್ದು ಮರಣ

ನಿದ್ದೆ ಮಾಡುತ್ತಿದ್ದಾಗ ಕೊಯಮತ್ತೂರು ಸಮೀಪದ ಅಪ್ಪುಕಾಲಂನಲ್ಲಿ ಮನೆ ಕುಸಿದು ಹನ್ನೆರಡು ವರ್ಷದ ಸುರೇಂದ್ರ ಎಂಬವನು ಗಾಯಗಳ ದೆಸೆಯಿಂದ ಆಸ್ಪತ್ರೆಯಲ್ಲಿ ಮರಣಹೊಂದಿದನು. ಆತನ ತಂದೆತಾಯಿಗಳಿಗೆ ತುಂಬಾ ಗಾಯಗಳಾಗಿವೆ.

○ ರಾಷ್ಟ್ರಗೀತೆ ಕಾಲದಲ್ಲಿ ಸರಿಯಾಗಿ ವರ್ತಿಸಲಿಲ್ಲವೆಂದು ಬೊಂಬಾಯಿನ 6 ಚಿತ್ರ ಮಂದಿರಗಳಲ್ಲಿ ಇದ್ದ 66 ಮಂದಿಯನ್ನು ಬಂಧಿಸಲಾಯಿತು.

★ ಭಾರತ ಮತ್ತು ಪಾಕೀಸ್ತಾನದ ಉನ್ನತ ಮಟ್ಟದ ಸಭೆ ಮುಂದಿನ ತಿಂಗಳು 1 ನೇ ತಾ. ವರೆಗೆ ನಡೆಯುವುದು.



ಮೈಸೂರು ರಾಜ್ಯದ 36 ನೇ ಲಾಟರಿ ಡ್ರಾದಲ್ಲಿ ಮೊದಲನೆ ಬಹುಮಾನವಾದ 1 ಲಕ್ಷ ರೂಪಾಯಿ ಚಕ್ಕನ್ನು ಶ್ರೀಗಳಾದ ರಾಮಶೆಟ್ಟಿ ಮತ್ತು ಸಿ.ಕೆ. ಸತ್ಯನಾರಾಯಣ ಅವರು ತಮ್ಮ ಸಿಂಡಿಕೇಟ್‌ಗೆ ಶ್ರೀ ಬಿ. ಶಿವಣ್ಣ ಅವರಿಂದ ಪಡೆಯುತ್ತಿದ್ದಾರೆ.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಶವರ ಜೊಟ್ಟಲು ಚಿತ್ರ

ಅ ನೆ - ಹು ಡು ಗ

S H A K T I

S U D H A

A Superb Tonic

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Contribute Liberally
to the National Defence Fund

ವುಡ್‌ಲ್ಯಾಂಡ್ 30-6-72ರಿಂದ ಅಮೋಘ 9 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಿಗಿನ ಪ್ರದರ್ಶನ ಪ್ರತಿ ದಿನ 10-30 ಮೊದಲರಾತ್ರಿ

ಅಪೆರಾ 30 6 72 ರಿಂದ

ಜೆಮಿನಿಯವರ ಮಹೋನ್ನತ ತೆಲುಗು ವರ್ಣ ಚಿತ್ರ

ಕಲೆಕ್ಟರ್ ಜಾನಕಿ

ದಿನ 3 ಪ್ರದರ್ಶನಗಳು

Help The Gorakshana

— Humanitarian Propoganda Monthly ....

Protect the Cow

Bank Road Bahusar, A Fair Price Shop in Actual Practice

Edited Printedand Published by Dharmapracharanirata M S Krishna Rao (Propretor) at the Satvavadi Press, Chamarajapuram Mysore 4